**ಸಿ.ಸಿ.ನಂ.: 1180/2024**

ಪಿ.ಡಬ್ಲ್ಯೂ: **1**

(ಇಂದು ದಿನಾಂಕಃ **24–02–2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು –ಆರೋಪಿ ಪರ ಶ್ರೀ. ಜಿ.ಆರ್.ಡಿ. ವಕೀಲರಿಂದ**

1. ನಾನು ಫಿರ್ಯಾದಿ ಸಂಸ್ಥೆಯಲ್ಲಿ ಕಳೇದ 5 ವರ್ಷಗಳಿಂದ ಶಾಖಾ ವ್ಯವಸ್ಥಾಪಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಕುಮಟಾ ಶಾಖೆಗೆ ಬರುವ ಪೂರ್ವದಲ್ಲಿ ಯಲ್ಲಾಪೂರ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಮ್ಮ ಫಿರ್ಯಾದಿ ಸಂಸ್ಥೆಯಲಿಲ ನಾವು ವಯಕ್ತಿಕ ಸಾಲ, ವಾಹನ ಸಾಲ ಹಾಗೂ ಇತರ ಸಾಲಗಳನ್ನು ನೀಡುತ್ತೇವೆ. ಈ ಎಲ್ಲಾ ಸಾಲಗಳ ಕುರಿತಾಗಿ ಒಂದೇ ರೀತಿಯಾದ ಬಡ್ಡಿ ಇರುತ್ತದೆ.

2. ಅರೋಪಿತಳ ಪರಿಚಯ ಇದೆ. ಆರೋಪಿತಳು ದಿನಾಂಕಃ 05/07/2022 ರಂದು 50 ಸಾವಿರ ಸಾಲಕ್ಕಾಗಿ ಅರ್ಜಿಯನ್ನು ಸಲ್ಲಿಸಿರುತ್ತಾಳೆ. ಅವರು ಟೇಲರಿಂಗ್ ಸಲುವಾಗಿ ಸಾಲಕ್ಕಾಗಿ ಅರ್ಜಿ ಯನ್ನು ಸಲ್ಲಿಸಿರುತ್ತಾಳೆ. ಆರೋಪಿತಳು ಟೇಲರಿಂಗ್ ಮಾಡುವ ಕುರಿತಾಗಿ ದಾಖಲಾತಿಯನ್ನು ಪಡೆದುಕೊಂಡಿರುವುದಿಲ್ಲ. ಈ ಕುರಿತಾಗಿ ನಾವು ಆಕೆಯ ಮನೆಗೆ ಹೋಗಿ ಸಾಲ ಮಂಜೂರು ಮಾಡುವ ಪೂರ್ವದಲ್ಲಿ ಪರೀಕ್ಷಿರುತ್ತೇವೆ.

3. ಸಾಲವನ್ನು ವಯಕ್ತಿಕವಾಗಿ ಮಂಜೂರು ಮಾಡುವ ಅಧಿಕಾರವನ್ನು ಹೊಂದಿದ್ದೀರಾ ಎಂದರೆ ಸಾಕ್ಷಿಯು ನಾವು ಶಿಫಾರಸ್ಸನ್ನು ಮಾಡುತ್ತೇವೆ. ಮಂಜೂರು ನಮ್ಮ ಆಡಳಿತ ಮಂಡಳಿಯಿಂದ ಮಾಡುತ್ತೇವೆ ಎಂದು ನುಡಿಯುತ್ತಾರೆ, ಸಾಲದ ಅರ್ಜಿಯನ್ನು ಸ್ವಲ್ಪ ಸಾಲಗಾರರು ಹಾಗೂ ಸ್ವಲ್ಪ ನಾವು ತುಂಬುತ್ತೇವೆ. ಸಾಕ್ಷಿಗೆ ನಿಪಿ 6 ನ್ನು ತೋರಿಸಲಾಗಿ ಅದರಲ್ಲಿ ಇರುವ ಮಾಹಿತಿಯನ್ನು ಆರೋಪಿತಳು

ಹೇಳಿದಂತೆ ನಾವು ತುಂಬಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ6 ರಲ್ಲಿರುವ ಎಲ್ಲಾ ಅಕ್ಷರಗಳು ನಮ್ಮ ಸಿಬ್ಬಂದಿಯದ್ದಾಗಿರುತ್ತದೆ.

4. ನನಗೆ ನಿಪಿ1 ನ್ನು ನಮ್ಮ ಆಡಳಿತ ಮಂಡಳಿಯವರು ನೀಡಿರುತ್ತಾರೆ. ನಾನು ಕುಮಟಾ ಶಾಖೆಗೆ ವರ್ಗಾವಣೆ ಆಗಿ ಬಂದ ನಂತರ ನಿಪಿ1 ನ್ನು ನನಗೆ ನೀಡಿರುತ್ತಾರೆ. ಸದ್ರಿ ನಿಪಿ1 ನ್ನು ಯಾವ ದಿನಾಂಕದಂದು ನೀಡಿರುತ್ತಾರೆ ಎಂದು ನನಗೆ ನೆನಪಿಲ್ಲ. ನಿಪಿ1 ಕ್ಕೆ ನಮ್ಮ ಜನರಲ್ ಮ್ಯಾನೇಜರ ಸಹಿ ಹಾಕಿರುತ್ತಾರೆ. ನಿಪಿ1 ಕ್ಕೆ ನಮ್ಮ ಆಡಳಿತ ಮಂಡಳಿಯವರು ಸಹಿ ಇದೆ ಎಂದು ಬರೆದಿರುತ್ತಾರೆ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರಧಾನ ಪ್ರಭಾರ ಪ್ರ.ದ.ನ್ಯಾ.ದಂ. ಕುಮಟಾ